ಒಳ್ಳೆಯ ಹುದ್ದೆಯಲ್ಲಿರುವುದರ ಜೊತೆಗೆ 'ಆಫ್‌ಶೋರ್'ನಲ್ಲಿ ಕೆಲಸಮಾಡುತ್ತಿದ್ದುದರಿಂದ ಚಂದ್ರಕಾಂತನಿಗೆ ಆತನ ಕಂಪನಿ ಭರ್ಜರಿ ಸವಲತ್ತುಗಳನ್ನೇ ನೀಡಿತ್ತು. ದೊಡ್ಡ ಮನೆ, ಐಷಾರಾಮಿ ಕಾರು, ಮನೆಗೆಲಸಕ್ಕೆ ಆಳು ಇತ್ಯಾದಿ. ಬಂದ ಕೆಲದಿನಗಳಲ್ಲೇ, ಆಳುಗಳನ್ನು ನಿಲ್ಲಿಸಿ ಮನೆಗೆಲಸವನ್ನೆಲ್ಲ ತಾನೇ ಮಾಡಿಕೊಳ್ಳತೊಡಗಿದಳು ಚೇತನಾ. ಆದರೂ ಸಮಯ ವ್ಯಯಿಸುವುದು ಕಷ್ಟವಾಗುತ್ತಿತ್ತು. ಬೆಳಿಗ್ಗೆ ಏಳಕ್ಕೇ ಎದ್ದು ಚಂದ್ರಕಾಂತ ಕೆಲಸಕ್ಕೆ ಹೋಗಿ ಬಿಡುತ್ತಿದ್ದ. ಆತನ ಕೆಲಸದ ವೇಳೇಯೇ ಹಾಗಿತ್ತು. ಬಿಸಿಲ ಝಳದ ಆ ಊರಿನಲ್ಲಿ ಮಧ್ಯಾಹ್ನ ಸಾಕಷ್ಟು ಬಿಡುವಿರುತ್ತಿತ್ತಾದರೂ ಚಂದ್ರಕಾಂತನಿಗೆ ಅನೇಕ ಕಾರಣಗಳಿಂದ ಮನೆಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಸಂಜೆ ಬರುವಾಗ ರಾತ್ರಿ ಎಂಟಾಗಿರುತ್ತಿತ್ತು. ಒಮ್ಮೊಮ್ಮೆ ಮಾಮೂಲಿಗಿಂತ ಬೇಗ ಬಂದನೆಂದರೆ ಡ್ರೈವಿಂಗ್ ಕ್ಲಾಸಿಗೆ ಹೋಗುತ್ತಿದ್ದ. ಆದಷ್ಟು ಬೇಗ ಲೈಸನ್ಸ್ ಪಡೆದು ತನ್ನ ಕಾರನ್ನು ತಾನೇ ಓಡಿಸಬೇಕೆಂಬ ಆತುರವಿತ್ತು ಆತನಿಗೆ.

ಆತ ಮನೆಯಲ್ಲಿ ಸಿಗುವ ಅತ್ಯಲ್ಪ ಅವಧಿಯಲ್ಲಿ ಚೇತನಾ ತನ್ನ ಊರಿನ, ಶಾಲಾ ಕಾಲೇಜು ದಿನಗಳ ಸಂಗತಿಗಳನ್ನು ಹೇಳಿಕೊಳ್ಳುತ್ತಿದ್ದಳು. ಚಂದ್ರಕಾಂತನಲ್ಲಿ ಮಾತನಾಡಲು ಅಂಥವೇನೂ ಇರುತ್ತಿರಲಿಲ್ಲ. ತಾನು ಮಾತನಾಡಬಹುದಾದಂತ ವಿಷಯಗಳು ಚೇತನಾಳಿಗೆ ರುಚಿಸಲಿಕ್ಕಿಲ್ಲವೆಂದು ಆತ ಅಂದುಕೊಂಡಿದ್ದ. "ನೀವೇನೂ ಸುದ್ದಿ ಹೇಳುವುದೇ ಇಲ್ಲವಲ್ಲ, ಬರೀ ನಾನೇ ಬಡಬಡಿಸುತ್ತಿರುತ್ತೇನೆ" ಎಂದು ಚೇತನಾ ಹೇಳಿದಾಗಲೆಲ್ಲ, "ನೀನು ಹೇಳುವುದನ್ನು ಕೇಳುತ್ತೇನಲ್ಲ" ಎಂದು ನಸುನಗುತ್ತಿದ್ದ. ಹೀಗಾಗಿ, ತಾನು ಹುರುಳಿಲ್ಲದ ಮಾತುಗಳನ್ನಾಡಿ ಬೋರ್ ಹೊಡೆಸುತ್ತೇನೇನೋ ಎಂದೂ ಅನ್ನಿಸುತ್ತಿತ್ತು ಚೇತನಾಳಿಗೆ.

ದಿನವಿಡೀ ಮನೆಯಲ್ಲೇ ಇರುತ್ತಾಳೆಂದು ಆಫೀಸಿಂದ ಬರುತ್ತಲೇ ಚೇತನಾಳನ್ನು ಹೊರಗೆಲ್ಲಾದರೂ ಕರೆದುಕೊಂಡು ಹೋಗುತ್ತಿದ್ದ ಚಂದ್ರಕಾಂತ. ಆದರೆ ಆ ಊರಿನಲ್ಲಿ ದಿನವೂ ಹೋಗುವುದಾದರೂ ಎಲ್ಲಿ? ಅದೇ ಬೀಚು, ಅದೇ ಅಂಗಡಿಗಳು, ಇರುವ ಮೂರ್ನಾಲ್ಕು ಹೋಟೆಲುಗಳು. ಕೆಲವೊಮ್ಮೆ ಲಾಂಗ್ ಡ್ರೈವ್ ಹೋಗೋಣವೆಂದು ಅರವತ್ತು ಕಿಲೋಮಿಟರುಗಳಷ್ಟು ದೂರವಿರುವ ದುಬಾಯಿಯ ಗಡಿಯವರೆಗೂ ಕರೆದೊಯ್ದು, ಅಲ್ಲಿರುವ ಸಣ್ಣ ಹೋಟೆಲಿನಲ್ಲಿ ಏನಾದರೂ ತಿನ್ನಿಸಿ ವಾಪಸ್ಸಾಗುತ್ತಿದ್ದ. ನಡುವೆ ಸಿಗುವ ಆತನ ಬಂದರು ಕಾಮಗಾರಿಯ ಸೈಟನ್ನು ದೂರದಿಂದಲೇ ತೋರಿಸುತ್ತಿದ್ದ. ಕಾರಲ್ಲಿ ಕುಳಿತಾಗಲೂ ಭಾರತದಿಂದ ಬರುವಾಗ ತಂದಿದ್ದ ಹತ್ತಿಪ್ಪತ್ತು ಕ್ಯಾಸಟ್ಟುಗಳಲ್ಲಿಯ ಹಾಡನ್ನು ತಿರುವಿ ತಿರುವಿ ಕೇಳಿ, ಅತೀ ಇಷ್ಟದ ಹಾಡೂ ಕೂಡ ಬೇಸರ ತರಿಸುತ್ತಿತ್ತು. ಕಾರಿನಲ್ಲಿ ಡ್ರೈವರ್ ಸಹ ಇರುತ್ತಿದ್ದುದರಿಂದ ಈ ಲಾಂಗ್ ಡ್ರೈವ್‌ನಲ್ಲಿ ಅಂಥ ಗಮ್ಮತ್ತೇನೂ ಇರುತ್ತಿರಲಿಲ್ಲ.

ಇತ್ತ ಚಂದ್ರಕಾಂತ ಕೆಲಸ ಮಾಡುವ ವಾತಾವರಣ ಕೂಡ ವಿಭಿನ್ನವಾಗಿತ್ತು. ಬಂದರು ವಿಸ್ತರಣೆಯ ಕೆಲಸ ನಡೆಯುತ್ತಿದ್ದುದು ಕಸಬಾದಿಂದ ಸುಮಾರು ಇಪ್ಪತ್ತು ಕಿಲೋಮೀಟರು ದೂರದಲ್ಲಿ. ಈ ಚಟುವಟಿಕೆಗಳನ್ನು ಆದಷ್ಟು ಗೌಪ್ಯವಾಗಿಡಬೇಕೆಂಬುದು ಓಮಾನ್ ದೇಶದ ಉದ್ದೇಶ. ಹೀಗಾಗಿ ಬಂದರು ನಿರ್ಮಾಣದಲ್ಲಿ ತೊಡಗಿರುವವರೆಲ್ಲರಿಗೂ ಸ್ಥಳದಲ್ಲೇ ವಸತಿ ಸೌಕರ್ಯ ಕಲ್ಪಿಸಿದ್ದರು. ಅಲ್ಲಿ ಒಳ ಬಂದು ಹೊರ ಹೋಗುವಾಗಲೆಲ್ಲ ಹೈ ಸೆಕ್ಯೂರಿಟಿ ನಿಯಮಗಳನ್ನು ಪಾಲಿಸಬೇಕಿತ್ತು. ಕೆಲ ದೊಡ್ಡ ಹುದ್ದೆಯ ಅಧಿಕಾರಿಗಳಿಗೆ ಮಾತ್ರ ಕಸಬಾ ಊರಲ್ಲಿ ಉಳಿಯುವ ಅವಕಾಶವಿತ್ತು. ಹೊಸದಾಗಿ ಮದುವೆಯಾಗಿದ್ದ ಕಾರಣಕ್ಕೆ ಚಂದ್ರಕಾಂತ ಕೂಡ ಆ ವಿನಾಯಿತಿ ಪಡೆದಿದ್ದ.